ಮುಂಗಡ ಪತ್ರದಲ್ಲಿ ನೀರಾವರಿ ಇಲಾಖೆಗೆ ಒದಗಿಸದ ಹಣ

71(654) ಶ್ರೀ ಎಂ. ದಿವಾಕರಬಾಬು (ಬಳ್ಳಾರಿ):

ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 1995-96ನೇ ಸಾಲಿನ ಮುಂಗಡ ಪತ್ರದಲ್ಲಿ ನೀರಾವರಿ ಇಲಾಖೆಗೆ ಎಷ್ಟು ಹಣ ಒದಗಿಸಲಾಗಿತ್ತು, ಅದರಲ್ಲಿ ಎಷ್ಟು ಹಣ ಖರ್ಚಾಗಿದೆ;

(ಆ) 1995-96 ಹಾಗೂ 1996-97ರ ವಾರ್ಷಿಕ ನೀರಾವರಿ ಇಲಾಖೆಯಲ್ಲಿ ತಲಾದಾಯ ಹಾಗೂ ತಲಾವೆಚ್ಚ ವಿವರ ನೀಡುವುದು?

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು)

(ಅ) ಒದಗಿಸಲಾದ ಹಣ: 903.56 ಕೋಟಿ ರೂಗಳು

ಖರ್ಚಾದ ಹಣ: 826.14 ಕೋಟಿ ರೂಗಳು

(ಆ) ನೀರಾವರಿ ಇಲಾಖೆಯಲ್ಲಿ ನೀರಾವರಿ ಯೋಜನೆಗಳಿಂದ ಪ್ರಯೋಜನ ಪಡೆಯುವ ಭೂಮಿಯ ವಿಸ್ತೀರ್ಣವನ್ನನುಸರಿಸಿ ಆದಾಯ ಮತ್ತು ವೆಚ್ಚವನ್ನು ಲೆಕ್ಕಹಾಕಲಾಗುತ್ತಿರುವುದರಿಂದ ತಲಾದಾಯ ಮತ್ತು ತಲಾವೆಚ್ಚದ ಅಂಕಿ ಅಂಶಗಳು ಲಭ್ಯವಿರುವುದಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ: (ಶ್ರೀ ಎಂ. ದಿವಾಕರ ಬಾಬು ಅವರ ಪರವಾಗಿ) ಕಳೆದ ಎರಡು ಮೂರು ವರ್ಷಗಳಿಂದ ಮೀಸಲಿಟ್ಟಿರುವ ಹಣವನ್ನು ಮುಂದೆ ತಾವು ಬಳ್ಳಾರಿಗೆ ಬಂದಾಗ ಬಳ್ಳಾರಿ ಜಿಲ್ಲೆಗೆ ಕೊಡುತ್ತೇವೆಂದು ಹೇಳಿದ್ದಿರಿ. ಅದನ್ನು ಯಾವಾಗ ಕೊಡುತ್ತೀರಿ?

ಶ್ರೀ ಕೆ. ಎನ್. ನಾಗೇಗೌಡ: ಮಾನ್ಯ ಅಧ್ಯಕ್ಷರು ಹೇಳಿದರೆ ಕೊಡುತ್ತೇನೆ.

ಅಧ್ಯಕ್ಷರು: ನಾವು ಹೇಳುವುದಿಲ್ಲ ಏಕೆಂದರೆ ನಿಮ್ಮ ಅವರ ಒಡಂಬಡಿಕೆ ಏನಿದೆಯೋ ಗೊತ್ತಿಲ್ಲ.

ಶ್ರೀ ಕೆ.ಎನ್.ನಾಗೇಗೌಡ: ರಾಜ್ಯದಲ್ಲಿ ನೀರಾವರಿಗೆ ಬೇಕಾಗಿರುವ ಹಣ ಎಷ್ಟು ಎಂದರೆ 15,502 ಕೋಟಿ ರೂಪಾಯಿಗಳು ಅದರಲ್ಲಿ 6754 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದರಲ್ಲಿ 29 ಲಕ್ಷ 60 ಸಾವಿರ ಹೆಕ್ಟೇರ್‌ಗೆ ನೀರು ಕೊಡಬೇಕಾಗಿದ್ದು 15 ಲಕ್ಷ 57 ಸಾವಿರ ಹೆಕ್ಟೇರ್‌ಗೆ ನೀರೊದಗಿಸಲಾಗಿದೆ. ಮೈನರ್ ಇರಿಗೇಷನ್‌ನಲ್ಲಿ ಈಗಾಗಲೇ ಒಂಭತ್ತು ಲಕ್ಷ ಹೆಕ್ಟೇರ್‌ಗೆ ನೀರು ಕೊಟ್ಟಿದ್ದೇವೆ. ಈ ವರ್ಷ 1365 ಕೋಟಿ ರೂಪಾಯಿ ಇಟ್ಟಿದ್ದೇವೆ. 900 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ.

ಅಧ್ಯಕ್ಷರು: ಎಂಟನೇ ಪಂಚವಾರ್ಷಿಕ ಯೋಜನೆಯೊಳಗೆ ಎಷ್ಟು ನೀರಾವರಿ ಮಾಡಿದ್ದೀರಿ?

ಶ್ರೀ ಕೆ.ಎನ್. ನಾಗೇಗೌಡ: 8ನೇ ಪಂಚವಾರ್ಷಿಕ ಯೋಜನೆಯಲ್ಲಿ 16.27 ಲಕ್ಷ ಹೆಕ್ಟೇರಿಗೆ ನೀರೊದಗಿಸುವ ಗುರಿ ಇತ್ತು ಅದರಲ್ಲಿಯೇ ನಾವು 15.57 ಲಕ್ಷ ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸಿದ್ದೇವೆ.?

**MR. SPEAKER:-** The figure doesn't agree with the reports produced by the Economic Survey report. please verity. I think those figures are incorrect.

ಶ್ರೀ ಅಲ್ಲಮ ವೀರಭದ್ರಪ್ಪ: ಅವರು ಏನು ಟಾರ್ಗೆಟ್ ಫಿಕ್ಸ್ ಮಾಡಿದ್ದಾರೆ ಅದನ್ನು ಕಾರ್ಯಗತ ಮಾಡುವುದಕ್ಕೆ ಬಳ್ಳಾರಿ ಜಿಲ್ಲೆಗೆ ಮುಂದಿನ ದಿನಗಳಲ್ಲಿ 30-40 ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ ಅದನ್ನು ಮಾಡುತ್ತೀರಾ ಇಲ್ಲವಾ?

ಶ್ರೀ ಕೆ.ಎನ್. ನಾಗೇಗೌಡ: ನೀವು ಹೇಳಿದರೆ ನಾನು ಹಣ ಕೊಡಿಸುತ್ತೇನೆ.

ಅಧ್ಯಕ್ಷರು: ನಾನು ಹಣ ಕೊಡಿ ಎಂದು ಹೇಳುವುದಿಲ್ಲ. ಮಾನ್ಯ ನಾಗೇಗೌಡರು ತುಂಬಾ ಧಾರಾಳ, ಏನು ಕೇಳಿದರೂ ಆಗಲಿ ಎನ್ನುತ್ತಾರೆ. ನೀವು ಸ್ವಲ್ಪ ಸರಿಯಾಗಿ ಕೇಳಿ ತಿಳಿದುಕೊಳ್ಳಿ.

ರಸ್ತೆಯ ಮೇಲೆ ಗಲೀಜು ನೀರು, ಹರಿಯುತ್ತಿರುವುದು

72(5) ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ):

ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸಜ್ಜನರಾವ್ ವೃತ್ತದ ವ್ಯಾಪ್ತಿಯಲ್ಲಿರುವ ಹೆರಿಗೆ ಆಸ್ಪತ್ರೆ ಆವರಣದಲ್ಲಿ ಇರುವ ಸ್ಟಾಫ್ ಕ್ವಾರ್ಟ್ರ್ಸ್‌ನ ಅಡಿಗೆ ಮನೆಯಿಂದ ಬಚ್ಚಲು ಮನೆಯಿಂದ ಬರುವ ಗಲೀಜು ನೀರು ರೋಶನ್‌ಬಾಗ್ ರಸ್ತೆಯಲ್ಲಿ ಕಳೆದ ಒಂದು ವರ್ಷದಿಂದ ಹರಿಯುತ್ತಿರುವ ವಿಚಾರದ ಬಗ್ಗೆ ದೂರುಗಳೇನಾದರೂ ಬಂದಿದೆಯೇ; (ಆ) ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ. ಅನಂತನಾಗ್ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು.)

(ಅ) ಬಂದಿದೆ.

(ಆ) ವಸತಿ ಗೃಹದ ಹಿಂಭಾಗದಲ್ಲಿ ಕೊಳಚೆ ನೀರಿನ ಪೈಪುಗಳು ಬ್ಲಾಕ್ ಆಗಿದ್ದ ಸಮಯದಲ್ಲಿ ಚರಂಡಿ ನೀರು ಹರಿಯುತ್ತಲಿದ್ದು, ಈಗ ಅದನ್ನು ಸರಿಪಡಿಸಲಾಗಿದೆ.

ಶ್ರೀಮತಿ. ಪ್ರಮೀಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೆ, ಸಜ್ಜನ್ ರಾವ್ ವೃತ್ತದ ವ್ಯಾಪ್ತಿಯಲ್ಲಿರುವ ಹೆರಿಗೆ ಆಸ್ಪತ್ರೆ ಆವರಣದಲ್ಲಿರುವ ಸ್ಟಾಫ್ ಕ್ವಾರ್ಟ್ರ್ಸ್‌ನ ಅಡಿಗೆ ಮನೆಯಿಂದ ಬಚ್ಚಲು ಮನೆಯಿಂದ